'ಏನೇ ಹೇಳು ಚಂದ್ರಾ, ನೀ ಮಾಡಿದ್ದು ತಪ್ಪು. ಸುಮ್ಮನೆ ನಿಜ ಹೇಳಬೇಕಿತ್ತು. ಆಮೇಲೆ ಯಾರೇನು ಮಾಡ್ತಾರೆ ಅಂತ ನೋಡ್ಕೋಬಹುದಿತ್ತು. ಈಗ ನೋಡು ಎಲ್ಲ ನಿನ್ನ ಮೇಲೆ ಬಂತು... ಯಾಕೆ ಸುಮ್ನೆ ಇಲ್ಲದ ಅಪವಾದ ಹೊತ್ಕೋತ್ತೀಯಾ?' ಅಮ್ಮ ಮೆಲುವಾಗಿ ಮಾತಾಡುತ್ತಿದ್ದರೂ ನನಗೆ ಸ್ಪಷ್ಟವಾಗೇ ಕೇಳುತ್ತಿತ್ತು.

'ಏ ಬಿಡಿ ಅಮ್ನೋರೆ, ಹೇಳಿ ಏನಾಗ್ಬೋದಿತ್ತು? ಅವನ ಸಂಸಾರ ಹಾಳಾಗಿರೋದು ಅಷ್ಟೇ. ಬಂದ ಹುಡ್ಗಿ ಕಣ್ಣೀರು ಹಾಕ್ಕೊಂಡು ಬದುಕು ಕಳೀಬೇಕಿತ್ತು. ನಂದೊಬ್ಬದ್ದೇ ಸಾಲ್ದಾ? ಈಗೇನಾಯ್ತು ಅಂತ, ಅವ್ನಾದ್ರೂ ಚೆನ್ನಾಗಿರ್ಲಿ' ಚಂದ್ರಾಳ ಮಾತೂ ಸ್ಪಷ್ಟವಿತ್ತು.

'ಅಂದ್ರೆ ನೀ ಹೇಳೋದೇನು? ಅವ್ನು ಮಾಡಿದ್ದು ಸರಿಯಾ? ತಪ್ಪು ನಿಂದೊಬ್ಬದ್ದೇನಾ?'

'ಅದೇ ಅಮ್ಮ ನಾನೂ ಹೇಳೊದು, ತಪ್ಪು ಅವ್ರೊಬ್ಬರದ್ದೇನಾ? ನಂದೂ ಇದ್ಯಲ್ವಾ? ಹೋಗ್ಲಿ ಬಿಡಿ, ಎಲ್ಲ ತಿಳ್ಕೂ ಮಾಡಿದ್ಮೇಲೆ ಇದ್ರಲ್ಲಿ ನಂದು, ಅವ್ರದ್ದು ಅಂತೇನು? ಇಬ್ರು ಕಷ್ಟ ಪಡೋ ಬದ್ಲು ಒಬ್ರು ಪಟ್ರಾಗ್ದೇ?'

'ನಿನ್ನಂತೋರು ಇರೋದ್ರಿಂದ್ಲೇ ಕಣೇ, ಪ್ರಪಂಚದಲ್ಲಿ ಗಂಡಸರ ಅಟ್ಟಹಾಸ ಹೆಚ್ಚಾಗಿರೋದು.'

ಅಮ್ಮನ ಮಾತುಗಳಿಗೆ ಚಂದ್ರಾ ಮೌನವಾಗಿದ್ದಳು. ಬಹುಶಃ ಅವಳು ಅಳುತ್ತಿರಬೇಕು. ನಾನು ಮಲಗಿದ್ದಲ್ಲಿಂದಲೇ ಊಹಿಸಿದೆ. ನನ್ನ ಸಂದೇಹ ನಿಜವಾಗಿತ್ತು.

'ಈಗ ಅಳು, ಈಗಲೂ ಏನಿಲ್ಲ ಕಣೇ ,ಹೋಗಿ ಹೀಗೀಗೆ ಅಂತ ಹೇಳ್ಬಿಡು ಇಲ್ಲ ಪೊಲೀಸಿಗಾದರೂ ಕಂಪ್ಲೇಂಟ್ ಕೊಡೆ' ಅಮ್ಮನ ದನಿ ಮತ್ತೆ ಕಿವಿಗಪ್ಪಳಿಸಿತು.

ಚಂದ್ರಾ ಅದಕ್ಕೂ ಉತ್ತರಿಸಲಿಲ್ಲ. 'ನೀ ಏನೇ ಹೇಳು ಚಂದ್ರಾ, ನೀನು ಮಾಡ್ತಾ ಇರೋದು ತಪ್ಪು. ಇವತ್ತು ಸರಿ, ನಾಳೆ ನಿನ್ನ ಮಗು ಕೇಳುತ್ತೆ ಅಪ್ಪ ಯಾರೂಂತ ಆಗೇನಂತೀಯ?' ಅಮ್ಮನ ಪ್ರಶ್ನೆಗೆ ಚಂದ್ರಾ ಕೊಕ್ಕನೆ ನಕ್ಕಂತಿತ್ತು.

ಅಮ್ಮ ಹೀಗೇ... ಯಾವುದೇ ವಿಷಯ ಸಿಗಲಿ ಅದನ್ನ ಹಿಡಿದು ಮುಟ್ಟಿ, ಮೂಸಿ, ತಡವಿ ಕೊಡವಿ ಅದರ ಕರುಳು ಈಚೆಗೆಳೆಯದೆ ಬಿಡುತ್ತಿರಲಿಲ್ಲ. ತನ್ನ ಸುತ್ತ ನಡೆವ ಪ್ರತಿಯೊಂದು ವಿಷಯದಲ್ಲೂ ಅಮ್ಮ ತನ್ನ ಮೂಗು ತೂರಿಸಿಕೊಂಡು ಹೋಗುತ್ತಿದ್ದಳು. ಯಾವ್ಯಾವುದೋ ಸಣ್ಣಪುಟ್ಟ ವಿಚಾರಗಳನ್ನು ಕೂಡ ಗಹನವಾಗಿ ಚರ್ಚಿಸುತ್ತ ಕೂರುವ ಅಮ್ಮನ ಮೇಲೆ ನನಗೆ ಸಿಟ್ಟು ಬರುತ್ತಿತ್ತು. ಆದರೆ, ವಾರಿಜಳ ಲೆಕ್ಕ ಬೇರೆಯಿತ್ತು. 'ಅವರನ್ನ ಅವರ ಪಾಡಿಗೆ ಬಿಡು ರವೀ, ಅವರವರ ಕತ್ತೆ ಟುಕುವ ತನಕ ಎಲ್ಲರೂ ನೋಡಬಲ್ಲರು. ನಿನ್ನಂತೇ ಎಲ್ಲರೂ ಯೋಚಿಸಬೇಕು ಅಥವಾ ನಿನ್ನ ಯೋಚನೆಯಷ್ಟೇ ಸರಿ ಅಂದುಕೊಳ್ಳೋದರಿಂದ ನೀನು ಒಂಟಿಯಾಗತೀಯ ಅಷ್ಟೇ' ಅನ್ನುತ್ತಿದ್ದಳು. ಅತ್ತ ಅಮ್ಮನಿಗೆ ನನ್ನ ವಿಷಯವಾಗಿ ಅತ್ಯಂತ ದುಗುಡವಿತ್ತು. ಎಷ್ಟೆಲ್ಲ ಆಸೆಪಟ್ಟು ಅಷ್ಟೊಂದು ಓದಿಸಿದರೆ, ಇಲ್ಲಿ ಈ ಹಳ್ಳಿಯಲ್ಲಿ ಕುಳಿತು ಆಕಾಶ ನೋಡುವ ಮಗ ಅವಳಿಗೆ ಹುಚ್ಚನಂತೆ ಕಂಡಿದ್ದರೆ ಆಶ್ಚರ್ಯ ಪಡಲಿಕ್ಕೇನೂ ಇರಲಿಲ್ಲ. 'ಎಷ್ಟೆಲ್ಲ ಕನಸಿತ್ತವ್ವ ನನಗೆ, ನನ್ನ ಮಗನೂ ನಾಳೆ ಡೀಸಿಯಾಗಿ ಊರಿಗೆ, ನಮಗೆ ಹೆಸರು ತರ್ತಾನೆ ಅಂತಲೇ ಅಂದುಕೊಂಡಿದ್ದೆ, ಡೀಸಿ ಬೇಡ, ಒಂದು ತಾಶೀಲ್ದಾರಾದ್ರೂ ಆಗಬಾರದ್ವಾ? ನೋಡು ನಮ್ಮ ಮನೆಯಲ್ಲಿ ಸಗಣಿ ಬಾಚುತ್ತಿದ್ದವನ ಮಗಳು ಇವತ್ತು ಕೆಂಪುಲೈಟಿನ ಕಾರಲ್ಲಿ ಜಮ್ಮಂತ ಓಡಾಡುತ್ತಾಳೆ. ಅವ್ವಯ್ಯ! ಅವಳಿಗೆ ಇರೋಕ್ಕೇಂತ ಬಂಗಲೆ ಕೊಟ್ಟಿದ್ದಾರಂತೆ... ಹಾಗೇ ಅರಮನೆ ತರ ಇದ್ಯಂತೆ! ಸಾಲದ್ದಕ್ಕೆ ಮೊನ್ನೆ ಯಾರೋ ಟೀವಿಯವರು ಬಂದು ಇಂಥ ಊರಿನ ಹುಡುಗಿ, ಇಲ್ಲಿ ಬೆಳೆದ ಹುಡುಗಿ, ಅಪ್ಪ ದುಡಿದ ಹೊಲ ಅಂತೆಲ್ಲ ಊರಿಗೆ ಊರನ್ನೇ ಇಂಟರ್‌ವ್ಯೂ ಮಾಡ್ಕೊಂಡು ಹೋದ್ರಂತೆ, ನಾನಂತೂ ತಲೆ ಹೊರ್ಗೆ